# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 164, ವಿದ್ಯಾಪೀಠ ಬೆಂಗಳೂರು.

ಸಂಖ್ಯೆ: ಸ.ಅ/ವಾ–164/08/2022–23 ದಿನಾಂಕ: 16–07–2022

**ವಾರ್ಡ್ ಸಮಿತಿ ಸಭೆಯ ನಡವಳಿಗಳು**

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ: 21–09–2020ರ ಆದೇಶದಂತೆ ದಿನಾಂಕ: 16–07–2022 ರಂದು ವಾರ್ಡ್ ಸಂಖ್ಯೆ: 164, ವಿದ್ಯಾಪೀಠದ ವಾರ್ಡ್ ಕಛೇರಿಯಲ್ಲಿ ನಡೆದ ಜುಲೈ ತಿಂಗಳ 3ನೇ ಶನಿವಾರದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸ್ಥಳ : ಬಿಬಿಎಂಪಿ ವಾರ್ಡ್ ಕಛೇರಿ, ವಿದ್ಯಾಪೀಠ ಸರ್ಕಲ್ ಹತ್ತಿರ

ಸಮಯ : ಸಂಜೆ 4.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ವಿಜಯ್‌ಕುಮಾರ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಎಂ.ಜೆ ಕುಮಾರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಗಿರಿನಗರ) ಉಪವಿಭಾಗ |
| 3 | ಶ್ರೀ ಎಂ. ರಮೇಶ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್–164, ವಿದ್ಯಾಪೀಠ |
| 4 | ಶ್ರೀ ಸುನಿಲ್ ಕುಮಾರ್ | ಕಂದಾಯ ವಸೂಲಿಗಾರರು, ವಾರ್ಡ್–164, ವಿದ್ಯಾಪೀಠ |
| 5 | ಶ್ರೀ ವಿಷಕಂಠಯ್ಯ ಹೆಚ್.ಎನ್ | ಕೆಲಸ ಪರಿವೀಕ್ಷಕರು, ವಾರ್ಡ್–164, ವಿದ್ಯಾಪೀಠ |
| 6 | ಶ್ರೀ ಸತೀಶ್ ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 164 |
| 7 | ಶ್ರೀ ಕೃಷ್ಣ ಮೂರ್ತಿ | ಅಭಿಯಂತರರು (ಬೆಸ್ಕಾಂ) |
| 8 | ಶ್ರೀ ಕೆ. ಮಲ್ಲಿಕಾರ್ಜುನ | ಸಾರ್ವಜನಿಕರು |
| 9 | ಶ್ರೀಮತಿ ಭಾಗ್ಯಮ್ಮ | ಸಾರ್ವಜನಿಕರು |
| 10 | ಶ್ರೀ ವೈ.ಎಸ್. ಶಿವಲಿಂಗಯ್ಯ | ಪತ್ರಕರ್ತರು |
| 11 | ಶ್ರೀ ಜಿ.ಎನ್. ರೆಡ್ಡಿ | ಘ.ತ್ಯಾ.ನಿ ಗುತ್ತಿಗೆದಾರರು |
| 12 | ಶ್ರೀ ಡಿ. ರಾಜು | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ಆರ್. ವಿಜಯ್‌ಕುಮಾರ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ಅಕಾಲಿಕ ಮಳೆಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಮರ ಅಥವಾ ಮರಗಳ ರೆಂಬೆಕೊಂಬೆಗಳು ಬಿದ್ದಿರುವುದಿಲ್ಲ ಹಾಗೂ ಯಾವುದೇ ವಿದ್ಯುತ್ ಹಾಗೂ ಇತರೆ ಅವಘಡಗಳು ಸಂಭವಿಸಿರುವುದಿಲ್ಲವೆಂದು ವಾರ್ಡ್ ಅಭಿಯಂತರರು, ಬೆಸ್ಕಾಂ ಅಭಿಯಂತರರು ಮತ್ತು ಬಿ.ಡಬ್ಲ್ಯೂಎಸ್.ಎಸ್.ಬಿ ಅಧಿಕಾರಿಗಳು ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

2. ಶ್ರೀ ನಿಖಿಲ್ ಗೌಡ ರವರು ರವರು ಕಳೆದ ವಾರ್ಡ್ ಸಮಿತಿ ಸಭೆಯಲ್ಲಿ ಅಶೋಕನಗರ ಅಡ್ಡರಸ್ತೆಗಳಲ್ಲಿ ಮರಗಳನ್ನು ಟ್ರಿಮ್ ಮಾಡಲು ತಿಳಿಸಿರುವ ಮೇರೆಗೆ ಸ್ಥಳ ಪರಿಶೀಲನೆ ಮಾಡಲಾಗಿ, ಶಿಥಿಲಾವಸ್ಥೆಯಲ್ಲಿರುವ ಅಥವಾ ಒಣಗಿರುವ ಹಾಗೂ ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ಮಾತ್ರ ಗುರುತಿಸಿ ತೆಗೆಯಲು ಕ್ರಮಕೈಗೊಳ್ಳುವುದಾಗಿ ಹಾಗೂ ಎಲ್ಲಾ ಆರೋಗ್ಯವಂತ ಮರಗಳ ರೆಂಬೆಕೊಂಬೆಗಳನ್ನು ತೆಗೆಯಲು ಸಾಧ್ಯವಿರುವುದಿಲ್ಲ ಎಂಬುದಾಗಿ ಹಾಗೂ ವ್ಯಯಕ್ತಿಕವಾಗಿ ಖಾಸಗಿ ಕಟ್ಟಡಗಳ ಮೇಲೆ ಹಬ್ಬಿರುವ ಮರಗಳ ರೆಂಬೆಕೊಂಬೆಗಳನ್ನು ತೆಗೆಯಲು ಸದರಿ ಕಟ್ಟಡ ಮಾಲೀಕರು ಛಾಯಾ ಚಿತ್ರದ ಸಮೇತ ದೂರನ್ನು ಅರಣ್ಯಾಧಿಕಾರು (ದಕ್ಷಿಣ) ರವರಿಗೆ ನೀಡಿ, ಅನುಮತಿಸಿದ ನಂತರ ನಿಯಮಾನುಸಾರ ತೆಗೆಯಲು ಕ್ರಮಕೈಗೊಳ್ಳಲಾಗುವುದಾಗಿ ವಾರ್ಡ್ ಅಭಿಯಂತರರಿಗೆ ಅರಣ್ಯಾಧಿಕಾರಿಗಳು ತಿಳಿಸಿರುವುದಾಗಿ ವಾರ್ಡ್ ಅಭಿಯಂತರರು ಮಾನ್ಯ ಅಧ್ಯಕ್ಷರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬ, ತಂತಿ ಮತ್ತು ಕೇಬಲ್‌ಗಳ ಮೇಲೆ ಬಾಗಿರುವ ಮರದ ರೆಂಬೆಕೊಂಬೆಗಳನ್ನು ಟ್ರಿಮ್ ಮಾಡಿದ ರೆಂಬೆಕೊಂಬೆಗಳನ್ನು ರಸ್ತೆಯಲ್ಲಿರುವ ಬಿಟ್ಟಿರುವುದು ಆರೋಗ್ಯ ಪರಿವೀಕ್ಷಕರು ಹಾಗೂ ವಾರ್ಡ್ ಅಭಿಯಂತರರು ಗಮನಿಸಿದ್ದು ಹಾಗೂ ಮಳೆಗಾಲವಾದ್ದರಿಂದ ಮನೆಗಳ ಬಳಿ ಹಾಕಿರುವ ರೆಂಬೆಕೊಂಬೆಗಳ ಮೇಲೆ ಅನಾಮಧೇಯರು ಕಸವನ್ನು ತಂದು ಸುರಿಯುತ್ತಿರುವುದಾಗಿ, ಇದರಿಂದ ಸೊಳ್ಳೆಗಳು ಉತ್ಪತ್ತಿಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಪ್ರತಿ ದಿನ ವಾರ್ಡ್ ಕಛೇರಿಗೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ನೀವು ತೆಗೆದಿರುವ ರೆಂಬೆಕೊಂಬೆಗಳನ್ನು ಸೂಕ್ತ ರೀತಿಯಲ್ಲಿ ತೆರವುಗೊಳಿಸುವಂತೆ ಸಭೆಯಲ್ಲಿ ಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

4. ವಾರ್ಡ್ ವ್ಯಾಪ್ತಿಯಲ್ಲಿ ಕಳೆದ ಸಭೆಯಲ್ಲಿ ನೈಸರ್ಗಿಕ ವಿಕೋಪದ ಬಗ್ಗೆ ಚರ್ಚಿಸಿದ್ದು, ಕಳೆದ ವಾರ್ಡ್ ಸಮಿತಿ ಸಭೆಯಲ್ಲಿ ಸಾರ್ವಜನಿಕರು ಕೋರಿರುವಂತೆ ತಗ್ಗು ಪ್ರದೇಶಗಳಾದ ಮಂಜುನಾಥ ಕಾಲೋನಿ ಮತ್ತು ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಬಡಾವಣೆಗಳಾಗಿದ್ದು, ಮಳೆಯಿಂದ ಸಂಭವಿಸುವ ಅವಘಡಗಳಿಗೆ ಲಭ್ಯವಿದ್ದ ರೂ: 40.00 ಲಕ್ಷಗಳಿದ್ದ ಅನುದಾನದಲ್ಲಿ ತಲಾ ರೂ: 20.00 ಲಕ್ಷಗಳಂತೆ ಮೇಲ್ಕಂಡ ಎರಡೂ ಬಡಾವಣೆಗಳ ರಸ್ತೆ ಬದಿ ಚರಂಡಿಗಳ ಹೂಳನ್ನು ತೆಗೆಯಲು 2 ಅಂದಾಜುಪಟ್ಟಿಯನ್ನು ತಯಾರಿಸಲಾಗಿ ಅನುಮೋದನೆಗೊಂಡಿದ್ದು, ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ ಎಂದು ವಾರ್ಡ್ ಅಭಿಯಂತರರಾದ ಶ್ರೀ ಎಂ. ರಮೇಶ್ ರವರು ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

5. ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯವರಿಗೆ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣಿ ಪ್ರದೇಶಗಳಲ್ಲಿ ಸಾರ್ವಜನಿಕ ಸಾಮಾಜಿಕ ಅಂತರ (Social Distance) ಕಾಪಾಡಿಕೊಳ್ಳುವುದು ಹಾಗೂ ಮಾಸ್ಕ ಧರಿಸುವುದರ ಬಗ್ಗೆ ಅರಿವು ಮೂಡಿಲು ಹಾಗೂ ಕ್ರಮಕೈಗೊಳ್ಳಲು ಮಾರ್ಷಲ್‌ಗಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಗಸ್ತು ಮಾಡುವಂತೆ ಸೂಚಿಸಲಾಗಿರುತ್ತದೆ, ಕೋವಿಡ್ ಪರೀಕ್ಷೆಗಳನ್ನು ಪ್ರತಿ ದಿನ ಸರಾಸರಿ 55 ಟೆಸ್ಟ್‌ಗಳನ್ನು ನಡೆಸುಲಾಗುತ್ತಿದ್ದು, ಒಟ್ಟು 825 ಕೋವಿಡ್ ಪರೀಕ್ಷೆಗಳನ್ನು ಮಾಡಲಾಗಿದ್ದು, ಸರಾಸರಿ 04 ಜನರಿಗೆ ಪಾಸಿಟಿವ್ ಲಕ್ಷಣಗಳು ಕಂಡುಬರುತ್ತಿವೆ ಎಂದು ತಿಳಿಸಿರುತ್ತಾರೆ

ಮುಂದುವರೆದು, 12-18 ವರ್ಷಗಳ ವಯೋಮಾನದವರಿಗೆ ಯಾವುದೇ ಚುಚ್ಚುಮದ್ದು ಲಭ್ಯವಿಲ್ಲದಿರುವುದಾಗಿ ಹಾಗೂ 18 ವರ್ಷ ಮೇಲ್ಪಟ್ಟವರಿಗೆ ಪ್ರತಿ ದಿನ ಕೋವ್ಯಾಕ್ಸಿನ್ 60 ಮತ್ತು 200 ಜನರಿಗೆ ಕೋವಿಶೀಲ್ಡ್ ಲಸಿಕೆಯನ್ನು ಹಾಗೂ 60 ವರ್ಷ ಮೇಲ್ಪಟ್ಟ ಒಟ್ಟು 40 ಜನರಿಗೆ ಬೂಸ್ಟರ್ ಡೋಸ್ ನೀಡಲಾಗಿದೆ ಎಂದು ಡಾ॥ ವಿನಿತ ರವರು ಮಾಹಿತಿಯನ್ನು ನೀಡಿರುತ್ತಾರೆ ಎಂದು ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

6. ವಾರ್ಡ್ ವ್ಯಾಪ್ತಿಯ ಎಲ್ಲಾ ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಾರಕ್ಕೆ ಒಂದು ಬಾರಿ ಔಷಧಿ ಸಿಂಪಡಣೆ ನಡೆಯುತ್ತಿದೆ. ಸಭೆಯಲ್ಲಿ ಹಾಜರಿದ್ದ ಶ್ರೀ ಸತೀಶ್ .ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸೊಳ್ಳೆ ಔಷಧಿ ಸಿಂಪಡಣಾ ಮತ್ತು ಫಾಗಿಂಗ್ ಮಾಡಿಸುತ್ತಿರುವುದಾಗಿ ಹಾಗೂ ಕಸ ವಿಲೇವಾರಿಯಲ್ಲಿ ಯಾವುದೇ ಲೋಪದೋಷಗಳು ಆಗದಂತೆ ಕ್ರಮಕೈಗೊಂಡಿರುವುದಾಗಿ ಹಾಗೂ ಬೆಸ್ಕಾಂ ವತಿಯಿಂದ ತೆಗೆದಿರುವ ಮರದ ರೆಂಬೆಕೊಂಬೆಗಳನ್ನು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸುವಂತೆ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳು ಅಧ್ಯಕ್ಷರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

7. ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಅಧಿಕಾರಿಗಳು ಆದ ಶ್ರೀ ಸುರೇಶ್ ರವರು 2022-23ನೇ ಸಾಲಿನಲ್ಲಿ ರೂ 500-00ಲಕ್ಷ ಬೇಡಿಕೆ ಇದ್ದು ಈ ಇದೂವರೆಗೂ ರೂ: 397.00 ಲಕ್ಷಗಳು ವಸೂಲಾಗಿದ್ದು, 15 ದಿನಗಳಲ್ಲಿ ರೂ: 2.50 ಲಕ್ಷಗಳ ಕಂದಾಯ ವಸೂಲಿ ಮಾಡಿರುವುದಾಗಿ ಉಳಿದಂತೆ ಮುಂದಿನ ದಿನಗಳಲ್ಲಿ ಬಾಕಿ ಇದ್ದ ಕಂದಾಯ ವಸೂಲಾತಿಯನ್ನು ಮಾಡಲಾಗುವುದು ಎಂದು ತಿಳಿಸಿ, ಮುಂದುವರೆದು, ಮತದಾರರ ಗುರುತಿನ ಚೀಟಿ ವಿತರಣೆ ನಿರಂತರವಾಗಿ ನಡೆಯುತ್ತಿರುತ್ತದೆ ಹಾಗೂ 18 ವರ್ಷ ಮೇಲ್ಪಟ್ಟವರೆಲ್ಲರಿಗೂ ಉಚಿತವಾಗಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿರುತ್ತದೆ ಎಂದು ಹಾಗೂ ಸಾರ್ವಜನಿಕರು ಹೊಸದಾಗಿ ಪರಿಚಯಿಸಿರುವ ಸ್ಮಾರ್ಟ್ ಕಾರ್ಡ್ ನೀಡುವಂತೆ ಕೋರಿದ್ದು, ಈ ಸಂದರ್ಭದಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳು ತಮಗೆ ಸ್ಮಾರ್ಟ್ ಕಾರ್ಡ್‌ನ್ನು ಬೇಕಾಗಿದ್ದರೆ Voters Helpline APP ಮುಖಾಂತರ ಸ್ಮಾರ್ಟ್ ಕಾರ್ಡ್‌ಗೆ ನೋಂದಾಯಿಸಿ ಅದಕ್ಕೆ ಸಂಬಂಧಸಿದ್ದ ದರವನ್ನು ಪಾವತಿಸಿ ಪಡೆಯಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಸಭೆಯಲ್ಲಿ ಚರ್ಚಿಸಿದ್ದು, ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಅಧ್ಯಕ್ಷರು ಮುಕ್ತಾಯಗೊಳಿಸಿದರು.

16/07/2022
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು(ದಕ್ಷಿಣ) ಬೃ.ಬೆ.ಮ.ಪಾಲಿಕೆ, ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
7. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ವಾರ್ಡ್ ಕಛೇರಿಯ ಸೂಚನಾ ಫಲಕಕ್ಕೆ
10. ಕಛೇರಿ ಪ್ರತಿ.